TC = 041

# 017/DM/21

| Register Number | | | | | | | | | |
|---|---|---|---|---|---|---|---|---|---|

## DEPARTMENTAL EXAMINATIONS

## TRANSLATION TEST – SECOND PAPER – TRANSLATION OF NEWS PAPER REPORT IN KANNADA TO ENGLISH

(Without Books)

Maximum Time : 2.30 hours | Maximum Marks : 100

Answer ALL questions.

1. Translate into English : (1 × 80 = 80)

ದೀಪಾವಳಿ

ದೀಪಗಳ ಬೆಳಕಿನ ಹಬ್ಬವಾದ ದೀಪಾವಳಿ ಅಥವಾ ದಿವಾಳಿಯು ಸಂತೋಷದ ಸಡಗರದ ಹಬ್ಬವಾಗಿದೆ. ಮಾತ್ರವಲ್ಲ ಈ ಹಬ್ಬವು ಎಲ್ಲೆ ಮೀರಿದ ಉತ್ಸಾಹ ಉಲ್ಲಾಸ ಹಾಗೂ ವಿಶ್ವ ಭ್ರಾತೃತ್ವವನ್ನು ಸಾರುವ ಸಂದರ್ಭವೂ ಕೂಡ ಹೌದು.

ಯಾವುದೇ ಜಾತಿ ವರ್ಗ ಅಥವಾ ಪ್ರಾದೇಶಿಕ್ಷತೆಯ ಭೇದವಿಲ್ಲದೆ ಪ್ರತಿಯೊಬ್ಬ ವ್ಯಕ್ತಿಯೂ ಕೂಡ ಅರ್ಥೈಸಿಕೊಂಡಿರುವ ವಿಚಾರವೇನೆಂದರೆ, ಬೆಳಕಿನ ಹಬ್ಬವಾದ ದೀಪಾವಳಿಯು ಯಾವುದೋ ಒಂದು ಸೀಮಿತವಾದ ಧರ್ಮಕ್ಕೆ ಸೇರಿದುದಲ್ಲ. ಅದಕ್ಕೆ ಬದಲಾಗಿ ಇದು ಇಡೀ ವಿಶ್ವದ ಸಂಭ್ರಮಾಚರಣೆಯ ಹಬ್ಬವಾಗಿದೆ. ನಮ್ಮ ಜೀವ, ಜೀವನ ಹಾಗೂ ಆತ್ಮದಲ್ಲಿರುವ ಅಂಧಕಾರವು ತೊಲಗಲಿ ಹಾಗೂ ನಮ್ಮ ಜೀವನದಲ್ಲಿ ಸದಾ ಜ್ಞಾನಜ್ಯೋತಿಯು ಪ್ರಕಾಶಿಸುತ್ತಿರಲಿ.

ನಾವು ಕೇವಲ ಬಹಿರಂಗದ ಅಥವಾ ಹೊರಗಿನ ಹೊರಪ್ರಪಂಚದ ಬೆಳಕಿನ ಕುರಿತಷ್ಟೇ ಚಿಂತಿಸುತ್ತೇವೆ. ಆದರೆ ನಾವು ಅರ್ಥ ಮಾಡಿಕೊಳ್ಳಬೇಕಾಗಿರುವ ಸಂಗತಿಯೇನೆಂದರೆ ಪ್ರತಿಯೋರ್ವ ವ್ಯಕ್ತಿಯ ಒಳಗಿನ ಆತ್ಮವು ಸದಾ ಪ್ರಕಾಶಮಾನವಾಗಬೇಕು. ಇಂತಹ ಸ್ಥಿತಿಯನ್ನು ಹೊಂದುವುದೇ ಅತ್ಯಂತ ಸುಖವಾದುದು ಎಂಬುದನ್ನು ನಾವೆಲ್ಲರೂ ಅರಿತುಕೊಳ್ಳಬೇಕು.

ಈ ಮಂಗಳಕರವಾದ ದೀಪಾವಳಿಯ ಸಂದರ್ಭದಲ್ಲಿ ಹೆಚ್ಚಿನ ಅಭ್ಯುದಯ ಹಾಗೂ ಸಂಪತ್ತನ್ನು ಸಾಧಿಸುವುದಕ್ಕಾಗಿ ಸಂಪತ್ತು ಹಾಗೂ ಧನ ಸಮೃದ್ಧಿಯ ಅಧಿದೇವತೆಯಾದ ಲಕ್ಷ್ಮೀ ದೇವಿಯನ್ನು ಶ್ರದ್ಧಾಭಕ್ತಿಯಿಂದ ಆರಾಧಿಸಲಾಗುತ್ತದೆ. ಹೆಚ್ಚಿನ ಸಂಪತ್ತಿಗಾಗಿ ಪೂಜೆಯನ್ನು ಕೈಗೊಳ್ಳುವ ದಿನವು ದೀಪಾವಳಿಯ ವಿಶೇಷವಾಗುತ್ತದೆ.

ಹೀಗೆ ದೀಪಾವಳಿಯನ್ನು ನಮ್ಮ ಭಾರತ ಹಾಗೂ ವಿಶ್ವಾದ್ಯಂತ ಸಂಭ್ರಮದಿಂದ ಆಚರಿಸಲಾಗುತ್ತದೆ.

[Turn over

2. ಈ ಕೆಳಕಂಡ ಗಾದೆಗಳನ್ನು ಆಂಗ್ಲ ಭಾಷೆಗೆ ಭಾಷಾಂತರಿಸಿರಿ. (10 × 2 = 20)

(a) ಅಡ್ಡಗೋಡೆ ಮೇಲೆ ದೀಪ ಇಟ್ಟಹಾಗೆ.

(b) ಅಕ್ಕಿ ಮೇಲೆ ಆಸೆ, ನೆಂಟರ ಮೇಲೆ ಇಷ್ಟ.

(c) ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ.

(d) ಹೊಳೆಯೋದೆಲ್ಲ ಚಿನ್ನ ಅಲ್ಲ.

(e) ತುಂಬಿದ ಕೊಡ ತುಳುಕುವುದಿಲ್ಲ.

(f) ರೋಗಿ ಬಯಸಿದ್ದೂ ಹಾಲು ಅನ್ನ, ವೈದ್ಯ ಹೇಳಿದ್ದೂ ಹಾಲು ಅನ್ನ.

(g) ಹನಿ ಹನಿ ಸೇರಿದರೆ ಹಳ್ಳ, ತೆನೆ ತೆನೆ ಸೇರಿದರೆ ಬಳ್ಳ.

(h) ದೇವರು ವರ ಕೊಟ್ರೂ ಪೂಜಾರಿ ವರ ಕೊಡಲಿಲ್ಲ.

(i) ಅತಿ ಆಸೆ ಗತಿಗೇಡು.

(j) ಕೆಟ್ಟ ಮೇಲೆ ಬುದ್ಧಿ ಬಂತು.